# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 39 (124) |
| ಸದಸ್ಯರ ಹೆಸರು | : | ಶ್ರೀ ಎಫ್.ಹೆಚ್.ಜಕ್ಕಪ್ಪನವರ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 17.08.2026 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಸಮಾಜ ಕಲ್ಯಾಣ ಇಲಾಖೆಯಿಂದ ನಡೆಸಲಾಗುತ್ತಿರುವ ವಸತಿ ಪ್ರೌಢ ಶಾಲೆಗಳೆಷ್ಟು; ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು;</td><td>ರಾಜ್ಯದಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ 874 (ಪರಿಶಿಷ್ಟ ಜಾತಿ -540, ಪರಿಶಿಷ್ಟ ವರ್ಗ-155 ಹಾಗೂ ಹಿಂದುಳಿದ ವರ್ಗ-179) ವಸತಿ ಮೊರಾರ್ಜಿ ದೇಸಾಯಿ/ರಾಣಿ ಚೆನ್ನಮ್ಮ/ಅಟಲ್ ಬಿಹಾರಿ ವಾಜಪೇಯಿ/ಇಂದಿರಾ ಗಾಂಧಿ ವಸತಿ ಶಾಲೆ/ಕಾಲೇಜುಗಳು ಮಂಜೂರಾಗಿ ಕಾರ್ಯನಿರ್ವಹಿಸುತ್ತಿವೆ.<br><br>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆ/ಕಾಲೇಜುಗಳಿಗೆ ಮಂಜೂರಾಗಿರುವ, ದಾಖಲಾಗಿರುವ ವಿದ್ಯಾರ್ಥಿಗಳ ವಿವರ ಈ ಕೆಳಕಂಡಂತಿದೆ.<br><br>
<table>
<tr><th rowspan="2">ಕ್ರ. ಸಂ.</th><th rowspan="2">ತರಗತಿ</th><th colspan="2">ಮಂಜೂರಾತಿ</th></tr>
<tr><th>ಬಾಲಕರು</th><th>ಬಾಲಕಿಯರು</th></tr>
<tr><td>1</td><td>6 ನೇ ತರಗತಿ</td><td>16490</td><td>26580</td></tr>
<tr><td>2</td><td>7 ನೇ ತರಗತಿ</td><td>16490</td><td>26580</td></tr>
<tr><td>3</td><td>8ನೇ ತರಗತಿ</td><td>15205</td><td>25285</td></tr>
<tr><td>4</td><td>9 ನೇ ತರಗತಿ</td><td>15180</td><td>25260</td></tr>
<tr><td>5</td><td>10 ನೇ ತರಗತಿ</td><td>15060</td><td>25010</td></tr>
<tr><td>6</td><td>I ಪಿಯುಸಿ</td><td>3800</td><td>4520</td></tr>
<tr><td>7</td><td>II ಪಿಯುಸಿ</td><td>3800</td><td>4520</td></tr>
<tr><td colspan="2">Grand Total</td><td>86025</td><td>137755</td></tr>
</table>
</td></tr>
<tr><td>ಆ)</td><td>ಈ ವಸತಿ ಪ್ರೌಢ ಶಾಲೆಗಳಿಗೆ ಹಂಚಿಕೆ ಮತ್ತು ಬಿಡುಗಡೆ ಮಾಡಿದ ಹಣವೆಷ್ಟು;</td><td>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆ/ಕಾಲೇಜುಗಳ ನಿರ್ವಹಣೆಗಾಗಿ ಹಾಗೂ ಕಟ್ಟಡ ನಿರ್ಮಾಣ ಕಾಮಗಾರಿಗಾಗಿ 2026-27ನೇ ಸಾಲಿಗೆ ರೂ.3033.00 ಕೋಟಿಗಳನ್ನು ಹಂಚಿಕೆ ಮಾಡಿದ್ದು, ಬಿಡುಗಡೆ, ವೆಚ್ಚ ಮಾಡಲಾಗಿರುವ ವಿವರವನ್ನು ಅನುಬಂಧ-01 ರಲ್ಲಿ ನೀಡಲಾಗಿದೆ.</td></tr>
</table>

**ಇ)** ಈ ವಸತಿ ಪ್ರೌಢ ಶಾಲೆಗಳು ಎಷ್ಟು ಸ್ವಂತ ಕಟ್ಟಡದಲ್ಲಿವೆ; ಎಷ್ಟು ಬಾಡಿಗೆ ಕಟ್ಟಡದಲ್ಲಿವೆ; ಸಂದಾಯ ಮಾಡುತ್ತಿರುವ ವಾರ್ಷಿಕ ಬಾಡಿಗೆ ಎಷ್ಟು;

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ 874 ವಸತಿ ಶಾಲೆ/ಕಾಲೇಜುಗಳು ಮಂಜೂರಾಗಿ ಕಾರ್ಯನಿರ್ವಹಿಸುತ್ತಿವೆ. 874 ವಸತಿ ಶಾಲೆ/ಕಾಲೇಜುಗಳ ಪೈಕಿ 674 ವಸತಿ ಶಾಲೆ/ಕಾಲೇಜುಗಳ ಸ್ವಂತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, 200 ವಸತಿ ಶಾಲೆ/ಕಾಲೇಜು ಪೈಕಿ ಬಾಡಿಗೆ/ ಬಾಡಿಗೆ ರಹಿತ /ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಘದ ವಸತಿ ಶಾಲೆಗಳಲ್ಲಿ ಸಂಯೋಜಿತವಾಗಿ ಕಾರ್ಯನಿರ್ಹಿಸುತ್ತಿವೆ. ವಿವರ ಈ ಕೆಳಕಂಡಂತಿದೆ.

| ಒಟ್ಟು ವಸತಿ ಶಾಲೆ/ ಕಾಲೇಜುಗಳು | ಸ್ವಂತ ಕಟ್ಟಡ | ಬಾಡಿಗೆ ರಹಿತ | ಸಂಯೋಜಿಸಿದ ಶಾಲೆಗಳು | ಬಾಡಿಗೆ | ಒಟ್ಟು ಬಾಡಿಗೆ ಮೊತ್ತ ವಾರ್ಷಿಕವಾಗಿ |
|---|---|---|---|---|---|
| 874 | 674 | 24 | 28 | 148 | 26,67,78,012/- |

ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ಹಿಸುತ್ತಿರುವ 148 ವಸತಿ ಶಾಲೆಗಳ ಬಾಡಿಗೆ ಬಾಬ್ತಿಗಾಗಿ ವಾರ್ಷಿಕವಾಗಿ ರೂ.26,67,78,012/-ಗಳನ್ನು ಭರಿಸಲಾಗುತ್ತಿದೆ. ಬಾಡಿಗೆ/ ಬಾಡಿಗೆ ರಹಿತ ಮತ್ತು ಸಂಯೋಜಿತವಾಗಿ ಕಾರ್ಯನಿರ್ವಹಿಸುತ್ತಿರುವ 200 ವಸತಿ ಶಾಲೆಗಳ ಪೈಕಿ 161 ವಸತಿ ಶಾಲೆಗಳಿಗೆ ನಿವೇಶನ ಲಭ್ಯವಿದ್ದು, 39 ವಸತಿ ಶಾಲೆಗಳಿಗೆ ನಿವೇಶನ ಲಭ್ಯವಿರುವುದಿಲ್ಲ. ನಿವೇಶನ ಲಭ್ಯವಿಲ್ಲದ ವಸತಿ ಶಾಲೆಗಳಿಗೆ ನಿವೇಶನಗಳನ್ನು ಮಂಜೂರು ಮಾಡುವಂತೆ ಸಂಬಂಧಿಸಿದ ಜಿಲ್ಲೆಗಳ ಜಿಲ್ಲಾಧಿಕಾರಿಗಳನ್ನು ಕೋರಲಾಗಿರುತ್ತದೆ.

ನಿವೇಶನ ಲಭ್ಯವಿರುವ 161 ವಸತಿ ಶಾಲೆಗಳ ಪೈಕಿ 121-ನಿರ್ಮಾಣ ಹಂತದಲ್ಲಿವೆ, 08-ಕಾಮಗಾರಿ ಪ್ರಾರಂಭಿಸಬೇಕಾಗಿರುವುದು, 04-ಟೆಂಡರ್ ಹಂತದಲ್ಲಿ, 28 ವಸತಿ ಶಾಲೆಗಳಿಗೆ ನಿವೇಶನ ಲಭ್ಯವಿರುತ್ತದೆ.

2026-27ನೇ ಸಾಲಿನ ಆಯವ್ಯಯ ಕಂಡಿಕೆ 187 ರಲ್ಲಿ ಪರಿಶಿಷ್ಟ ಜಾತಿಯ 20, ಪರಿಶಿಷ್ಟ ಪಂಗಡದ 5 ಮತ್ತು ಹಿಂದುಳಿದ ವರ್ಗಗಳ 5 ವಸತಿ ಶಾಲೆಗಳು ಸೇರಿದಂತೆ ನಿವೇಶನ ಲಭ್ಯವಿರುವ ಒಟ್ಟು 30 ಕ್ರೈಸ್ ವಸತಿ ಶಾಲೆಗಳಿಗೆ 22 ಕೋಟಿ ರೂ. ಘಟಕ ವೆಚ್ಚದಲ್ಲಿ ಒಟ್ಟಾರೆ 660 ಕೋಟಿ ರೂ. ವೆಚ್ಚದಲ್ಲಿ ಸ್ವಂತ ಕಟ್ಟಡಗಳನ್ನು ನಿರ್ಮಾಣ ಮಾಡಲು ಪ್ರಸ್ತಾವನೆಯನ್ನು ಸಚಿವ ಸಂಪುಟ ಮುಂದೆ ಮಂಡಿಸಲು ಕ್ರಮವಹಿಸಲಾಗುತ್ತಿದೆ.

ಮೇಲೆ ವಿವರಿಸಿರುವಂತೆ ಕಟ್ಟಡ ಕಾಮಗಾರಿಯನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಿ ಎಲ್ಲಾ ವಸತಿ ಶಾಲೆಗಳಿಗೂ ಸ್ವಂತ ಕಟ್ಟಡ ನಿರ್ಮಾಣ ಮಾಡಲು ಅಗತ್ಯ ಕ್ರಮವಹಿಸಲಾಗುವುದು.

**ಈ)** ಸಮಾಜ ಕಲ್ಯಾಣ ಇಲಾಖೆ ನಡೆಸುತ್ತಿರುವ ಒಟ್ಟು ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಸತಿ ನಿಲಯಗಳೆಷ್ಟು; ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; ಸ್ವಂತ ಕಟ್ಟಡದಲ್ಲಿ ಎಷ್ಟು ಇವೆ; ಬಾಡಿಗೆ ಕಟ್ಟಡದಲ್ಲಿ ಎಷ್ಟಿವೆ;

ಸಮಾಜ ಕಲ್ಯಾಣ ಇಲಾಖೆ ವತಿಯಿಂದ ನಡೆಸುತ್ತಿರುವ ಒಟ್ಟು ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ | ವಿವರ | ನಿಲಯಗಳ ಸಂಖ್ಯೆ | ವಿದ್ಯಾರ್ಥಿಗಳ ಸಂಖ್ಯೆ |
|---|---|---|---|
| 01 | ಸರ್ಕಾರಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು | 1213 | 97817 |
| 02 | ಸರ್ಕಾರಿ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು | 731 | 116184 |
| | **ಒಟ್ಟು :** | **1944** | **214001** |

ಸದರಿ ವಿದ್ಯಾರ್ಥಿ ನಿಲಯಗಳಲ್ಲಿ ಸ್ವಂತ ಕಟ್ಟಡ ಮತ್ತು ಬಾಡಿಗೆ ಕಟ್ಟಡಗಳ ವಿವರ ಕೆಳಕಂಡಂತಿದೆ.

| ವಿದ್ಯಾರ್ಥಿನಿಲಯ | ಸ್ವಂತ ಕಟ್ಟಡ | ಬಾಡಿಗೆ ಕಟ್ಟಡ | ಒಟ್ಟು |
|---|---|---|---|
| ಮೆಟ್ರಿಕ್ ಪೂರ್ವ | 1145 | 68 | 1213 |
| ಮೆಟ್ರಿಕ್ ನಂತರದ | 566 | 165 | 731 |
| **ಒಟ್ಟು** | **1711** | **233** | **1944** |

**ಉ)** ಎಲ್ಲಾ ವಸತಿ ಶಾಲೆ ಮತ್ತು ವಸತಿ ನಿಲಯಗಳಲ್ಲಿ ಸೇವೆ ಸಲ್ಲಿಸುತ್ತಿರುವ ವೃಂದವಾರು ಸಿಬ್ಬಂದಿಯ ಸಂಖ್ಯೆ ಎಷ್ಟು; ಇವರಲ್ಲಿ ಖಾಯಂ ಸಿಬ್ಬಂದಿ ಎಷ್ಟು; ವೃಂದವಾರು, ಹೊರಗುತ್ತಿಗೆ ಮೇಲೆ ಇರುವ ಸಿಬ್ಬಂದಿ ಎಷ್ಟು? (ವೃಂದವಾರು ಮಾಹಿತಿ ನೀಡುವುದು);

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಯ ಅಧೀನದಲ್ಲಿ, ಒಟ್ಟು 874 ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, ವಸತಿ ಶಾಲೆ/ ಕಾಲೇಜುಗಳಿಗೆ 20495 (9756 ಬೋಧಕ, 2432 ಬೋಧಕೇತರ, 8307-ಗ್ರೂಪ್-ಡಿ) ಬೋಧಕ, ಬೋಧಕೇತರ ಮತ್ತು ಗ್ರೂಪ್-ಡಿ ವೃಂದದ ಹುದ್ದೆಗಳು ಮಂಜೂರಾಗಿರುತ್ತವೆ. ವಿವರ ಈ ಕೆಳಕಂಡಂತಿದೆ.

| ಕ್ರ ಸಂ | ವೃಂದ | ಮಂಜೂರಾದ ಹುದ್ದೆಗಳ ಸಂಖ್ಯೆ | ಭರ್ತಿ | ಖಾಲಿ ಹುದ್ದೆಗಳ ಸಂಖ್ಯೆ |
|---|---|---|---|---|
| 1 | A | 73 | 35 | 38 |
| 2 | B | 1591 | 911 | 680 |
| 3 | C | 10524 | 5584 | 4940 |
| 4 | D | 8307 | 8223* | 84 |
| | **ಒಟ್ಟು** | **20495** | **14753** | **5742** |

ಆರ್ಥಿಕ ಇಲಾಖೆಯ ನಿರ್ದೇಶನದಂತೆ ಗ್ರೂಪ್-ಡಿ ವೃಂದದ ಹುದ್ದೆಗಳನ್ನು ಹೊರಸಂಪನ್ಮೂಲದ ಮೂಲಕ ಸೇವೆ ಪಡೆಯಲು ನಿರ್ದೇಶಿಸಲಾಗುತ್ತಿದೆ. ಅದರಂತೆ ಜಿಲ್ಲಾ ಹಂತದಲ್ಲಿ ಹೊರಸಂಪನ್ಮೂಲ ಏಜೆನ್ಸಿ ಮೂಲಕ ಸೇವೆಯನ್ನು ಪಡೆಯಲಾಗುತ್ತಿದೆ.

ಖಾಲಿ ಇರುವ ಬೋಧಕ ಹುದ್ದೆಗಳ ಎದುರಾಗಿ ಜಿಲ್ಲಾ ಹಂತದಲ್ಲಿ ಅತಿಥಿ ಶಿಕ್ಷಕರು/ಉಪನ್ಯಾಸಕರುಗಳನ್ನು ಸಂಘದ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನಿಗದಿಪಡಿಸಿರುವ ವಿದ್ಯಾರ್ಹತೆಯನುಸಾರ ತಾತ್ಕಾಲಿಕವಾಗಿ ವಸತಿ ಶಾಲೆಗಳ ಶೈಕ್ಷಣಿಕ ಚಟುವಟಿಕೆಗಳನ್ನು ನಿರ್ವಹಿಸಲಾಗುತ್ತಿದ್ದು ಹಾಗೂ ಬೋಧಕೇತರ ಹುದ್ದೆಗಳ ಸೇವೆಯನ್ನು ಜಿಲ್ಲಾ ಹಂತದಲ್ಲಿ ಹೊರಸಂಪನ್ಮೂಲ ಏಜೆನ್ಸಿ ಮೂಲಕ ತಾತ್ಕಾಲಿಕವಾಗಿ ಪಡೆದು ವಸತಿ ಶಾಲೆಗಳನ್ನು ನಿರ್ವಹಿಸಲಾಗುತ್ತಿದೆ.

ಸರ್ಕಾರ ಆದೇಶ ಸಂಖ್ಯೆ:ಸಕಇ/ಎಂಡಿಎಸ್/418/2022 ದಿನಾಂಕ 29.06.2024 ರಲ್ಲಿ ಆರ್ಥಿಕ ಇಲಾಖೆಯು 875 ಹುದ್ದೆಗಳನ್ನು ಸಹಮತಿಸಿದ್ದು, 49 ಹಿಂಬಾಕಿ ಮತ್ತು ಕಲ್ಯಾಣ ಕರ್ನಾಟಕ ವೃಂದದ 396 ಒಟ್ಟು 1320 ಬೋಧಕ/ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, 1110 ಹುದ್ದೆಗಳಿಗೆ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಉಳಿದ 106 ನಿಲಯಪಾಲಕರ ಮತ್ತು 104 ಪ್ರಥಮ ದರ್ಜೆ ಸಹಾಯಕರ ಹುದ್ದೆಗಳಿಗೆ ಅಧಿಸೂಚನೆಗಳನ್ವಯ ಹೊರಡಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಕ್ರಮವಹಿಸುವುದು.

ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳನ್ನು, ಈ ಕೆಳಕಂಡಂತೆ ಗ್ರೂಪ್ ಸಿ ಮತ್ತು ಗ್ರೂಪ್ ಡಿ ಹುದ್ದೆಗಳು ಮಂಜೂರಾಗಿರುತ್ತವೆ.

| ಕ್ರ ಸಂ | ವೃಂದವಾರು ಮಾಹಿತಿ | ಮಂಜೂರಾತಿ ಸಂಖ್ಯೆ | ಖಾಯಂ ಸಿಬ್ಬಂದಿಗಳ ಸಂಖ್ಯೆ | ಕರ್ತವ್ಯ ನಿರ್ವಹಿಸುತ್ತಿರುವ ಹೊರಸಂಪನ್ಮೂಲ ಸಿಬ್ಬಂದಿಗಳ ಸಂಖ್ಯೆ |
|---|---|---|---|---|
| 1 | ಗ್ರೂಪ್ -ಸಿ | 2768 | 1799 | 121 |
| 2 | ಗ್ರೂಪ್-ಡಿ | 8892 | 2220 | 9519 |
| | **ಒಟ್ಟು** | **11660** | **4019** | **9640** |

ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿನ ವಸತಿ ಶಾಲೆ ಮತ್ತು ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳ ಸಂಖ್ಯಾ ಬಲದಂತೆ ಹೊರಸಂಪನ್ಮೂಲ ಸೇವೆ ಮೇರೆಗೆ ಅಡುಗೆಯವರು, ಅಡುಗೆ ಸಹಾಯಕರು ಹಾಗೂ ಕಾವಲುಗಾರರನ್ನು ನೇಮಕ ಮಾಡಿಕೊಳ್ಳುವುದರಿಂದ ಗ್ರೂಪ್ ಡಿ ವೃಂದದಲ್ಲಿ ಮಂಜೂರಾತಿಗಿಂತ ಹೊರಸಂಪನ್ಮೂಲ ಸಿಬ್ಬಂದಿಗಳ ಸಂಖ್ಯೆ ಹೆಚ್ಚಾಗಿರುತ್ತದೆ.

**SWD/275/MDS/2026**

(ಕೆ.ಹೆಚ್.ಮುನಿಯಪ್ಪ)

ಸಮಾಜ ಕಲ್ಯಾಣ ಸಚಿವರು.

## ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಫ್. ಹೆಚ್. ಜಕ್ಕಪ್ಪನವರ್ (ನಾಮ ನಿರ್ದೇಶನ ಹೊಂದಿದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 39(124)ಕ್ಕೆ ಅನುಬಂಧ-1**

**2026-27ನೇ ಸಾಲಿನಲ್ಲಿ ನಿರ್ವಹಣೆ ಹಾಗೂ ನಿರ್ಮಾಣಕ್ಕಾಗಿ ಹಂಚಿಕೆಯಾದ ಬಿಡುಗಡೆಯಾದ ಹಾಗೂ ಖರ್ಚುಮಾಡಲಾದ ವಿವರ (ದಿನಾಂಕ:10.08.2026 ರ ಅಂತ್ಯಕ್ಕೆ)**

(ರೂ.ಕೋಟಿಗಳಲ್ಲಿ)

| ಕ್ರ. ಸಂ | ವರ್ಗ | ಆರಂಭಿಕ ಶಿಲ್ಕು | ಮಂಜೂರಾದ ಅನುದಾನ | ಬಿಡುಗಡೆಯಾದ ಅನುದಾನ | ಖಜಾನೆಯಿಂದ ಸೆಳೆದ ಮೊತ್ತ | ಒಟ್ಟು ಲಭ್ಯವಿರುವ ಅನುದಾನ | ಖರ್ಚುಮಾಡಲಾದ ಅನುದಾನ | ಶೇಕಡವಾರು % |
|---|---|---|---|---|---|---|---|---|
| 1 | 2 | 3 | 4 | 5 | 6 | 7 (3+6) | 8 | 9 |
| | | | | **ನಿರ್ವಹಣೆ** | | | | |
| 1 | ಪರಿಶಿಷ್ಟ ಜಾತಿ | 0.00 | 1041.60 | 260.40 | 260.40 | 260.40 | 260.40 | 100% |
| 2 | ಪರಿಶಿಷ್ಟ ವರ್ಗ | 0.00 | 284.75 | 71.19 | 71.19 | 71.19 | 71.19 | 100% |
| 3 | ಹಿಂದುಳಿದ ವರ್ಗ | 0.00 | 406.85 | 101.71 | 101.71 | 101.71 | 101.71 | 100% |
| | **ಒಟ್ಟು (A)** | | **1733.20** | **433.30** | **433.30** | **433.30** | **433.30** | **100%** |
| | | | | **ನಿರ್ಮಾಣ** | | | | |
| 1 | ಪರಿಶಿಷ್ಟ ಜಾತಿ | 981.49 | 650.00 | 0.00 | 0.00 | 981.49 | 107.44 | 11% |
| 2 | ಪರಿಶಿಷ್ಟ ವರ್ಗ | 271.28 | 279.00 | 0.00 | 0.00 | 271.28 | 34.37 | 13% |
| 3 | ಹಿಂದುಳಿದ ವರ್ಗ | 91.40 | 268.20 | 0.00 | 0.00 | 91.40 | 9.76 | 11% |
| | **ಒಟ್ಟು (B)** | | **1197.20** | **0.00** | **0.00** | **1344.17** | **151.57** | **11%** |
| | | | | **ಯಂತ್ರೋಪಕರಣಗಳು ಮತ್ತು ಸಾಧನ ಸಾಮಗ್ರಿಗಳು** | | | | |
| 1 | ಪರಿಶಿಷ್ಟ ಜಾತಿ | 5.65 | 50.00 | 0.00 | 0.00 | 5.65 | 5.65 | 100% |
| 2 | ಪರಿಶಿಷ್ಟ ವರ್ಗ | 11.59 | 21.00 | 0.00 | 0.00 | 11.59 | 11.59 | 100% |
| 3 | ಹಿಂದುಳಿದ ವರ್ಗ | 15.11 | 31.80 | 0.00 | 0.00 | 15.11 | 10.59 | 70% |
| | **ಒಟ್ಟು (C)** | | **102.80** | **0.00** | **0.00** | **32.35** | **27.83** | **86%** |
| | **ಒಟ್ಟು (A+B+C)** | | **3033.20** | **433.30** | **433.30** | **1809.82** | **612.70** | **34%** |